TG – FAME ಸರಣಿ
(ಉದ್ದೇಶಿತ ಗುಂಪಿಗೆ ಹಣಕಾಸು ಜಾಗೃತಿ ಸಂದೇಶಗಳು)




# ಹಣಕಾಸು ಸಾಕ್ಷರತೆ



## ಹಿರಿಯ ನಾಗರಿಕರಿಗಾಗಿ

ಹಣಕಾಸು ಸಾಕ್ಷರತೆ ಮತ್ತು ಅಭಿವೃದ್ಧಿ ವಿಭಾಗ, ಭಾರತೀಯ ರಿಸರ್ವ್ ಬ್ಯಾಂಕ್

**ಸಂದೇಶ 1**

ವಂಚಕ ಯೋಜನೆಗಳು ಮತ್ತು ಹಗರಣಗಳ ಬಗ್ಗೆ ಜಾಗರೂಕರಾಗಿರಿ

**ಸಂದೇಶ 2**

ಬ್ಯಾಂಕುಗಳಲ್ಲಿ ಮತ್ತು ಬ್ಯಾಂಕ್ ಲೋಕಪಾಲರಲ್ಲಿ ದೂರು ಸಲ್ಲಿಸುವುದು ಹೇಗೆ ಎಂಬುದನ್ನು ತಿಳಿದುಕೊಳ್ಳಿ

**ಸಂದೇಶ 3**

ಮರಣೋತ್ತರ ಆಸ್ತಿ ವಿಲೇವಾರಿ – ವಿವಿಧ ಆಯ್ಕೆಗಳು

**ಸಂದೇಶ 4**


ಪಿಂಚಣಿದಾರರೇ, ನೀವು ಹಸನ್ಮುಖರಾಗಿರಲು ಹಲವು ಸಕಾರಣಗಳು

**ಸಂದೇಶ 5**

ನಿವೃತ್ತಿ ನಂತರದ ಜೀವನಕ್ಕೆ ಸೂಕ್ತವಾದ ಹೂಡಿಕೆ ಉತ್ಪನ್ನಗಳು



## ಸಂದೇಶ 1 : ವಂಚಕ ಯೋಜನೆಗಳು ಮತ್ತು ಹಗರಣಗಳ ಬಗ್ಗೆ ಜಾಗರೂಕರಾಗಿರಿ



## ನಿಯಂತ್ರಕರಿಗೆ ತಿಳಿಸಿ ಸಹಕರಿಸಿ

ಹಗರಣಗಳನ್ನು ವರದಿಮಾಡಿ

ವಂಚಕ ಯೋಜನೆಗಳ ಬಗ್ಗೆ ಸಂಬಂಧಪಟ್ಟವರಿಗೆ ಮಾಹಿತಿ ನೀಡಿ

ಆರ್‌ಬಿಐ, ಸೆಬಿ, ಐಆರ್‌ಡಿಎಐ, ಎನ್‌ಹೆಚ್‌ಬಿಯಿಂದ ನಿಯಂತ್ರಕ ಸಂಸ್ಥೆಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಿರಿ

ನಿಮ್ಮ ದೂರುಗಳನ್ನು ಸಲ್ಲಿಸಿ ಮತ್ತು ಅದು ಯಾವ ಹಂತದಲ್ಲಿದೆ ಎಂದು ನಿಗಾವಹಿಸಿ

ನಿಮ್ಮ ದೂರುಗಳನ್ನು ಸಲ್ಲಿಸಿ ಮತ್ತು ಅದರ ಬಗ್ಗೆ ನಿಗಾವಹಿಸಿ

**ಸಚೇತ್**

ಎಸ್‌ಎಲ್‌ಸಿಸಿಯ ಒಂದು ಉಪಕ್ರಮ

**www.sachet.rbi.org.in**

ವಿವಿಧ ಕಾನೂನುಗಳ ಬಗ್ಗೆ ತಿಳಿದುಕೊಳ್ಳಿ

ಅನಿಯಂತ್ರಿತ ಯೋಜನೆಗಳ ಬಗ್ಗೆ ಹೆಚ್ಚು ಓದಿಕೊಳ್ಳಿ

ನಿಮ್ಮ ನಿಯಂತ್ರಕರೊಂದಿಗೆ ಸಹಕರಿಸಿ

## ಸಂದೇಶ 2 : ಬ್ಯಾಂಕುಗಳಲ್ಲಿ ಮತ್ತು ಬ್ಯಾಂಕ್ ಲೋಕಪಾಲರಲ್ಲಿ ದೂರು ಸಲ್ಲಿಸುವುದು ಹೇಗೆ ಎಂಬುದನ್ನು ತಿಳಿದುಕೊಳ್ಳಿ

### ಕುಂದುಕೊರತೆಗಳ ಪರಿಹಾರ

**ಹಂತ 1**

ನಿಮ್ಮ ಬ್ಯಾಂಕಿಗೆ ಲಿಖಿತವಾಗಿ / ಇ-ಮೇಲ್ ಮೂಲಕ ಅಥವಾ ಗ್ರಾಹಕ ಸೇವಾ ಉಚಿತ ಕರೆ ಸಂಖ್ಯೆಗೆ ಕರೆ ಮಾಡಿ ದೂರು ಸಲ್ಲಿಸಿ

ಪ್ರತಿಕ್ರಿಯೆಗಾಗಿ 30 ದಿನಗಳ ಕಾಲ ನಿರೀಕ್ಷಿಸಿ

**ಹಂತ 2**

ಬ್ಯಾಂಕಿನಿಂದ ಪ್ರತಿಕ್ರಿಯೆ ಬಾರದಿದ್ದಲ್ಲಿ ಅಥವಾ ಬಂದಂತಹ ಪ್ರತಿಕ್ರಿಯೆಯು ತೃಪ್ತಿದಾಯಕ ಎನಿಸದಿದ್ದಲ್ಲಿ ಬ್ಯಾಂಕಿಂಗ್ ಲೋಕಪಾಲ (ಬ್ಯಾಂಕಿಂಗ್ ಓಂಬುಡ್ಸ್‌ಮನ್)ರನ್ನು ಸಂಪರ್ಕಿಸಿ. ಬ್ಯಾಂಕಿಂಗ್ ಲೋಕಪಾಲರ ಸಂಪರ್ಕ ವಿವರಗಳು ಮತ್ತು ಅವರ ಅಧಿಕಾರ ವ್ಯಾಪ್ತಿಯ ಪ್ರದೇಶಗಳ ವಿವರಗಳಿಗೆ ಈ ಜಾಲತಾಣಕ್ಕೆ ಭೇಟಿನೀಡಿ: https://bankingombudsman.rbi.org.in ಬ್ಯಾಂಕಿಂಗ್ ಲೋಕಪಾಲರಿಗೆ ದೂರುಗಳನ್ನು ಆನ್‌ಲೈನ್ ಅಥವಾ ಇ-ಮೇಲ್ ಅಥವಾ ಅಂಚೆ ಮೂಲಕ ಸಲ್ಲಿಸಬಹುದು

ಲೋಕಪಾಲರು ದೂರಿಗೆ ಸಂಬಂಧಿಸಿದಂತೆ ಬ್ಯಾಂಕು ಮತ್ತು ಗ್ರಾಹಕರ ನಡುವೆ ಒಂದು ಇತ್ಯರ್ಥಕ್ಕೆ ಬರಲು ಪ್ರಯತ್ನಿಸುತ್ತಾರೆ. ಹೀಗೆ ಪರಸ್ಪರ ಸಮ್ಮತವಾಗುವಂತಹ ಇತ್ಯರ್ಥವು ಸಾಧ್ಯವಾಗದಿದ್ದಲ್ಲಿ, ಲೋಕಪಾಲರು ಅವರಿಗೆ ಸಲ್ಲಿಸಿದ ಮಾಹಿತಿಗಳು ಮತ್ತು ದಾಖಲೆಗಳನ್ನಾಧರಿಸಿ ಒಂದು ನಿರ್ಣಯ ಅಥವಾ ತೀರ್ಮ ನೀಡುತ್ತಾರೆ.

**ಹಂತ 3**

ಕೆಲವು ಸಂದರ್ಭಗಳಲ್ಲಿ, ಲೋಕಪಾಲರು ನೀಡಿದ ಪರಿಹಾರವು ತೃಪ್ತಿದಾಯಕವಾಗಿರದಿದ್ದಲ್ಲಿ, ಗ್ರಾಹಕರು 30 ದಿನಗಳ ಒಳಗೇ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಬಹುದು. ಭಾರತೀಯ ರಿಸರ್ವ್ ಬ್ಯಾಂಕಿನ ಉಪ ಗವರ್ನರ್‌ರವರು ಮೇಲ್ಮನವಿ ಪ್ರಾಧಿಕಾರಿಯಾಗಿರುತ್ತಾರೆ.


## ಸಂದೇಶ 3 ಮರಣೋತ್ತರ ಆಸ್ತಿ ವಿಲೇವಾರಿ – ವಿವಿಧ ಆಯ್ಕೆಗಳು

### ನಾಮನಿರ್ದೇಶನ

ಮರಣಾನಂತರದ ಆಸ್ತಿ ವಿಲೇವಾರಿಗೆ ಸಂಬಂಧಿಸಿದಂತೆ ಹಿರಿಯ ನಾಗರಿಕರಿಗೆ ಹಲವು ಆಯ್ಕೆಗಳಿವೆ. ಅವುಗಳಲ್ಲಿ ಎಲ್ಲಕ್ಕಿಂತ ಮುಖ್ಯವಾದದು 'ನಾಮನಿರ್ದೇಶನ (ನಾಮಿನೇಷನ್)'. ಆದರೆ ಉಯಿಲು (will) ಬರೆದಿಟ್ಟಿದ್ದಲ್ಲಿ, ಅದು ನಾಮನಿರ್ದೇಶನವನ್ನು ತನ್ನಿಂತಾನೇ ವಜಾಮಾಡುತ್ತದೆ.

| | | |
|---|---|---|
| ನಾಮನಿರ್ದೇಶನ ಸೌಲಭ್ಯವು ಎಲ್ಲಾ ಬಗೆಯ ಹಣಕಾಸು ಉತ್ಪನ್ನಗಳು ಮತ್ತು ಭದ್ರಸುಪರ್ದಿಗೆ ನೀಡಿದ ವಸ್ತುಗಳು (ಸೇಫ್ ಕಸ್ಟಡಿ) ಮತ್ತು ಭದ್ರತಾ ಲಾಕರುಗಳಿಗೆ ದೊರೆಯುತ್ತದೆ. | ನಾಮನಿರ್ದೇಶನವು ಕ್ಲೇಮುಗಳನ್ನು ತ್ವರಿತವಾಗಿ ಇತ್ಯರ್ಥ ಮಾಡಲು ಮತ್ತು ಕುಟುಂಬವರ್ಗದವರಿಗೆ ಸಂಕಷ್ಟಗಳನ್ನು ಕಡಿಮೆ ಮಾಡಲುಸಹಾಯಕವಾಗಿದೆ. | ನಾಮ ನಿರ್ದೇಶನದ ಅರ್ಜಿಯು ನೋಂದಾಯಿಸಲ್ಪಟ್ಟಿದೆ ಎಂಬುದನ್ನು ಖಾತರಿಪಡಿಸಿಕೊಳ್ಳಿ. ಅಗತ್ಯವೆನಿಸಿದಲ್ಲಿ ನಾಮ ನಿರ್ದೇಶನವನ್ನು ಬದಲಾಯಿಸಬಹುದು. |


### ಮರಣೋತ್ತರ ಆಸ್ತಿ ವಿಲೇವಾರಿಗೆ ಇತರ ಸಾಧ್ಯತೆಗಳು






## ಸಂದೇಶ 4 : ಪಿಂಚಣಿದಾರರೇ, ನೀವು ಹಸನ್ಮುಖರಾಗಿರಲು ಹಲವು ಸಕಾರಣಗಳು

ಪಿಂಚಣಿಗಾಗಿ ಪ್ರತ್ಯೇಕ ಖಾತೆ ತೆರೆಯಬೇಕಾಗಿಲ್ಲ




ಪಿಂಚಣಿ ಖಾತೆಯನ್ನು ಬೇರೊಂದು ಶಾಖೆಗೆ ಅಥವಾ ಬೇರೊಂದು ಬ್ಯಾಂಕಿಗೆ ವರ್ಗಾಯಿಸಬಹುದು

ಪಿಂಚಣಿ ಪಡೆಯಲು ಈಗಿರುವ ಖಾತೆಯನ್ನೇ ಬಳಸಬಹುದು

ಪ್ರತಿ ವರ್ಷ ನವೆಂಬರ್ ತಿಂಗಳಿನಲ್ಲಿ ನಿಮ್ಮ 'ಜೀವಂತ ಪ್ರಮಾಣಪತ್ರ'ವನ್ನು ನಿಮ್ಮ ಬ್ಯಾಂಕಿನ ಶಾಖೆಗೆ ಸಲ್ಲಿಸಿ, ಆ ಬ್ಯಾಂಕಿನಿಂದ ಸಹಿ ಮಾಡಿದ ಸ್ವೀಕೃತಿ ಪತ್ರವನ್ನು ಪಡೆಯಬೇಕೆಂಬುದು ನೆನಪಿರಲಿ.
ಒಂದುವೇಳೆ ಪಿಂಚಣಿದಾರರಿಗೆ ತೀವ್ರ ಅನಾರೋಗ್ಯ/ಅಶಕ್ತತೆಯ ಕಾರಣದಿಂದ ಜೀವಂತ ಪ್ರಮಾಣ ಪತ್ರವನ್ನು ಸಲ್ಲಿಸಲು ಸಾಧ್ಯವಾಗದಿದ್ದಲ್ಲಿ ಬ್ಯಾಂಕಿನ ಅಧಿಕಾರಿಗಳೇ ಪಿಂಚಣಿದಾರರ ಮನೆ ಅಥವಾ ಆಸ್ಪತ್ರೆಗೆ ಭೇಟಿ ನೀಡಿ ಅವರಿಂದ ಜೀವಂತ ಪ್ರಮಾಣಪತ್ರವನ್ನು ಪಡೆದುಕೊಳ್ಳುತ್ತಾರೆ.

'ಜೀವನ್‌ಪ್ರಮಾಣ್' ಎಂಬ ಡಿಜಿಟಲ್ ರೂಪದ ಜೀವಂತ ಪ್ರಮಾಣ ಪತ್ರವನ್ನು ನಿಮ್ಮ ಆಧಾರ್ ಸಂಖ್ಯೆ ಅಥವಾ ಮೊಬೈಲ್ ಬಳಸಿ ಈ ಜಾಲತಾಣದಲ್ಲಿ ಸಲ್ಲಿಸಬಹುದು:
www.jeevanpramaan.gov.in

## ಜಂಟಿ ಖಾತೆಗಳು ಮತ್ತು ಅವಧಿ ಪೂರ್ವದಲ್ಲಿ ಠೇವಣಿ ಹಿಂಪಡೆಯುವಿಕೆ ಬಗ್ಗೆ ಮಾಹಿತಿ

1. ನಿಮ್ಮ ಪತಿ ಅಥವಾ ಪತ್ನಿಯೊಂದಿಗೆ ಜಂಟಿ ಖಾತೆಯನ್ನು ತೆರೆದು ನಾಮನಿರ್ದೇಶನವನ್ನು ನೋಂದಾಯಿಸಿ ಕೊಳ್ಳುವುದು ಅಥವಾ ಖಾತೆಯನ್ನು ಜಂಟಿ ಖಾತೆದಾರರ ಪೈಕಿ 'ಇಬ್ಬರಲ್ಲೊಬ್ಬರು ಅಥವಾ ಬದುಕುಳಿದವರು' ಅಥವಾ 'ಮೊದಲಿನವರು ಅಥವಾ ಬದುಕುಳಿದವರು' ನಿರ್ವಹಿಸುವಂತೆ ಏರ್ಪಾಟು ಮಾಡಿಕೊಳ್ಳುವುದು ಸೂಕ್ತ.

2. ನಿಮ್ಮ ನಿಶ್ಚಿತ/ಅವಧಿ ಠೇವಣಿಯನ್ನು ಅವಶ್ಯವೆನಿಸಿದಾಗ ಅವಧಿ ಪೂರ್ವದಲ್ಲಿಯೂ ಹಿಂಪಡೆಯಲು ಅನುಕೂಲವಾಗುವಂತೆ, ಠೇವಣಿ ಇಡುವಾಗ ಅಥವಾ ಆ ನಂತರ ಠೇವಣಿಯ ಅವಧಿಯಲ್ಲಿ ಬ್ಯಾಂಕಿಗೆ ಈ ಬಗ್ಗೆ ಆದೇಶ/ಅಧಿಕಾರ (ಮ್ಯಾಂಡೇಟ್) ನೀಡಿರುವುದನ್ನು ಖಚಿತಪಡಿಸಿಕೊಳ್ಳುವುದು ಅಗತ್ಯ.

3. ಒಂದು ವೇಳೆ ನಿಮ್ಮ ನಿಶ್ಚಿತ ಕಾಲಾವಧಿ ಠೇವಣಿಯು ಪರಿಪಕ್ವವಾದ ಕೂಡಲೇ ಹಣ ಹಿಂಪಡೆಯದಿದ್ದಲ್ಲಿ, ಬ್ಯಾಂಕು ತನ್ನಿಂತಾನೇ ಠೇವಣಿಯನ್ನು ಪ್ರಸಕ್ತ ಬಡ್ಡಿ ದರದಲ್ಲಿ ಮತ್ತೊಂದು ಅವಧಿಗೆ ನವೀಕರಿಸುತ್ತದೆ. ಆದರೆ ನೀವು ಠೇವಣಿ ಇಡುವಾಗಲೇ ಈ ಸೌಲಭ್ಯಕ್ಕೆ ಒಪ್ಪಿಗೆ ನೀಡಿರಬೇಕಾಗುತ್ತದೆ.

## ವಯಸ್ಸಾದ/ಅನಾರೋಗ್ಯಪೀಡಿತ/ಅಶಕ್ತ ವ್ಯಕ್ತಿಗಳು ಬ್ಯಾಂಕ್ ಖಾತೆಯನ್ನು ನಿರ್ವಹಿಸುವಿಕೆ

1. ನಿಮಗೆ ವಯಸ್ಸಾಗಿದ್ದರೆ, ಅನಾರೋಗ್ಯದಿಂದಿದ್ದರೆ ಅಥವಾ ವಿಕಲಚೇತನರಾಗಿದ್ದರೆ ನಿಮ್ಮ ಹೆಬ್ಬೆಟ್ಟಿನ ಗುರುತಿನ ಮೂಲಕ ಹಣ ಹಿಂಪಡೆಯಬಹುದು. ಹೆಬ್ಬೆಟ್ಟಿನ ಗುರುತನ್ನು ಬ್ಯಾಂಕಿಗೆ ಪರಿಚಯವಿರುವ ಇಬ್ಬರು ಸ್ವತಂತ್ರ ಸಾಕ್ಷೀದಾರರು, ಅದರಲ್ಲಿ ಒಬ್ಬರು ಜವಾಬ್ದಾರಿಯುತ ಬ್ಯಾಂಕ್ ಅಧಿಕಾರಿ, ಗುರುತಿಸಬೇಕಾಗುತ್ತದೆ.

2. ನಿಮಗೆ ಹೆಬ್ಬೆಟ್ಟಿನ ಗುರುತು ಹಾಕವುದೂ ಸಾಧ್ಯವಾಗದಿದ್ದಲ್ಲಿ ಮತ್ತು ದೈಹಿಕವಾಗಿ ಬ್ಯಾಂಕಿಗೆ ಹಾಜರಾಗುವುದೂ ಅಸಾಧ್ಯವಾದಲ್ಲಿ ಚೆಕ್ಕು ಅಥವಾ ಹಣ ಹಿಂಪಡೆಯುವ ಚೀಟಿಯ ಮೇಲೆ ಯಾವುದಾದರೊಂದು ಗುರುತನ್ನು (ಮಾರ್ಕ್) ಪಡೆದುಕೊಂಡು ಅದನ್ನು ಬ್ಯಾಂಕಿಗೆ ಪರಿಚಯವಿರುವ ಇಬ್ಬರು ಸ್ವತಂತ್ರ ಸಾಕ್ಷೀದಾರರು, ಅದರಲ್ಲಿ ಒಬ್ಬ ಜವಾಬ್ದಾರಿಯುತ ಬ್ಯಾಂಕ್ ಅಧಿಕಾರಿ, ಗುರುತಿಸಬೇಕಾಗುತ್ತದೆ.

3. ಈ ಮೇಲ್ಕಂಡಂತೆ ಪಡೆದ ಚೆಕ್ಕು ಅಥವಾ ಹಣ ಹಿಂಪಡೆಯುವ ಚೀಟಿಯ ಮೇಲಿನ ಗುರುತಿನ ಆಧಾರದ ಮೇಲೆ ಬ್ಯಾಂಕಿನಿಂದ ಹಣವನ್ನು ಹಿಂಪಡೆಯುವ ವ್ಯಕ್ತಿಯನ್ನು ಸೂಚಿಸುವಂತೆ ಬ್ಯಾಂಕು ನಿಮಗೆ ಹೇಳಬಹುದು. ಅಂತಹ ವ್ಯಕ್ತಿಯನ್ನು ಇಬ್ಬರು ಸ್ವತಂತ್ರ ವ್ಯಕ್ತಿಗಳು ಸಾಕ್ಷಿಯೊಂದಿಗೆ ಗುರುತಿಸಬೇಕು. ಹೀಗೆ ಬ್ಯಾಂಕಿನಿಂದ ಹಣ ಪಡೆಯುವ ವ್ಯಕ್ತಿಯ ಸಹಿಯನ್ನು ತನಗೆ ನೀಡಬೇಕು ಎಂದು ಬ್ಯಾಂಕು ಕೇಳಬಹುದು.

# ಸಂದೇಶ 5 : ನಿವೃತ್ತಿ ನಂತರದ ಜೀವನಕ್ಕೆ ಸೂಕ್ತವಾದ ಹೂಡಿಕೆ ಉತ್ಪನ್ನಗಳು

## ಹಿರಿಯ ನಾಗರಿಕರ ಉಳಿತಾಯ ಯೋಜನೆ (Senior Citizens' Savings Scheme-SCSS)



ನಿವೃತ್ತರಿಗೆ 'ಹಿರಿಯ ನಾಗರಿಕರ ಉಳಿತಾಯ ಯೋಜನೆ 2004' ಒಂದು ಉತ್ತಮ ಆಯ್ಕೆಯಾಗಿದೆ. ಈ ಯೋಜನೆಯಲ್ಲಿ ಆಕರ್ಷಕ ದರದಲ್ಲಿ ಬಡ್ಡಿ ದೊರೆಯುವುದಲ್ಲದೆ ಬಡ್ಡಿಯನ್ನು 3 ತಿಂಗಳಿಗೊಮ್ಮೆ ಪಾವತಿಸಲಾಗುತ್ತದೆ. ಗಳಿಸಿದ ಬಡ್ಡಿಯು ಅನ್ವಯ ದರದಲ್ಲಿ ತೆರಿಗೆಗೆ ಒಳಪಡುತ್ತದೆ. ಹೂಡಿಕೆ ಮಿತಿ ಪ್ರತಿ ವ್ಯಕ್ತಿಗೆ ಗರಿಷ್ಠ ರೂ. 15 ಲಕ್ಷ.

## ನಿಶ್ಚಿತ ಠೇವಣಿಗಳು



ವಾರ್ಷಿಕ ಆದಾಯ ರೂ. 5.00 ಲಕ್ಷಗಳಿಗಿಂತ ಕಡಿಮೆ ಇರುವವರಿಗೆ ನಿಶ್ಚಿತ ಠೇವಣಿಗಳು ಒಂದು ಉತ್ತಮ ಆಯ್ಕೆ. ಏಕೆಂದರೆ ಅವರು ಶೇ.5 ತೆರಿಗೆ ವ್ಯಾಪ್ತಿಗೆ ಒಳಪಡುತ್ತಾರೆ. ವಾರ್ಷಿಕ ಆದಾಯ ರೂ. 5.00 ಲಕ್ಷಗಳಿಗಿಂತ ಹೆಚ್ಚು ಇರುವವರು, ನಿಶ್ಚಿತ ಠೇವಣಿಯಿಂದ ಗಳಿಸಿದ ಬಡ್ಡಿ ಆದಾಯದ ಮೇಲೆ ಶೇ.20 / ಶೇ.30ರಷ್ಟು ತೆರಿಗೆ ಪಾವತಿಸಬೇಕಾಗುತ್ತದೆ.

## ಹಿಮ್ಮುಖ ಅಡಮಾನ (Reverse Mortgage)



ನಿವೃತ್ತ ನಿಧಿಯ ಇಡುಗಂಟು ಸಾಕಷ್ಟು ಇಲ್ಲದಿರುವ, ಆದರೆ ಸ್ವಂತ ಮನೆ ಹೊಂದಿರುವ ವ್ಯಕ್ತಿಗಳಿಗೆ ನಿವೃತ್ತಿ ನಂತರದ ನಗದು ಅವಶ್ಯಕತೆಗಳನ್ನು ಪೂರೈಸಲು ಹಿಮ್ಮುಖ ಅಡಮಾನವು ಅನುಕೂಲಕರವಾಗಿದೆ. ಇದರಿಂದ ಬರುವ ಆದಾಯವು ತೆರಿಗೆ ಮುಕ್ತವಾಗಿರುವುದರಿಂದ ನಿವೃತ್ತರಿಗೆ ಹೆಚ್ಚುವರಿ ಲಾಭ ದೊರೆಯುತ್ತದೆ.

## ವರ್ಷಾಶನ ಯೋಜನೆಗಳು (Annuity Plans)



ವರ್ಷಾಶನ ಯೋಜನೆಗಳನ್ನು ವಿಮಾ ಕಂಪೆನಿಗಳು ನೀಡುತ್ತವೆ. ಹೂಡಿಕೆ ಮಾಡುವಾಗಲೇ ಪ್ರತಿಫಲ ದರವೂ ನಿಗದಿತವಾಗುವುದರಿಂದ ಈ ಯೋಜನೆಯು ನಿವೃತ್ತರಿಗೆ ನಿರೀಕ್ಷಿಸಿದ ನಗದು ಹರಿವನ್ನು ಒದಗಿಸುತ್ತದೆ. 5, 10, 15 ವರ್ಷಗಳ ಅವಧಿಗೆ ನಿಶ್ಚಿತವಾದ ವರ್ಷಾಶನ ಪಾವತಿ (ಆನ್ಯುಯಿಟಿ ಪೇಮೆಂಟ್ಸ್) ಪಡೆಯುವುದು, ಹೂಡಿಕೆದಾರರ ಮರಣಾನಂತರ ಹೂಡಿಕೆ ಮೊತ್ತದ ವಾಪಸಾತಿ, ಹೂಡಿಕೆದಾರರ ಗಂಡ/ಹೆಂಡತಿ ಜೀವಿಸಿರುವವರೆಗೂ ವರ್ಷಾಶನ ಪಾವತಿ ಇವೇ ಮುಂತಾದ ವಿವಿಧ ಆಯ್ಕೆಗಳು ಈ ಯೋಜನೆಯಲ್ಲಿ ಲಭ್ಯವಿವೆ.

ಅಂಚೆ ಕಛೇರಿಗಳು ಮತ್ತು ಬ್ಯಾಂಕುಗಳಲ್ಲಿ ಲಭ್ಯವಿರುವ ಮಾಸಿಕ ವರಮಾನ ಯೋಜನೆ (ಎಂಐಎಸ್) ಯು ಇದಕ್ಕೆ ಉದಾಹರಣೆಯಾಗಿದ್ದು, ಈ ಯೋಜನೆಯನ್ವಯ ಗಳಿಸಿದ ವರ್ಷಾಶನದ ಮೇಲೆ ವಿವಿಧ ಹಂತದ ದರಗಳಲ್ಲಿ ತೆರಿಗೆ ವಿಧಿಸಲಾಗುವುದು.

## ಹಿರಿಯ ನಾಗರಿಕರಿಗೆ ಬ್ಯಾಂಕಿಂಗ್ ಸೌಲಭ್ಯಗಳು : ಭಾರತೀಯ ರಿಸರ್ವ್ ಬ್ಯಾಂಕಿನ ಇತ್ತೀಚಿನ ಉಪಕ್ರಮಗಳು

| | |
|---|---|
| **ಪ್ರತ್ಯೇಕ ಕೌಂಟರು/ಹಿರಿಯ ನಾಗರಿಕರು ಮತ್ತು ವಿಕಲ ಚೇತನರಿಗೆ ಆದ್ಯತೆ** | ಸ್ಪಷ್ಟವಾಗಿ ಗುರುತಿಸಬಹುದಾದ ಪ್ರತ್ಯೇಕ ಕೌಂಟರು ಅಥವಾ ಹಿರಿಯ ನಾಗರಿಕರು, ದೃಷ್ಟಿಮಾಂದ್ಯರು ಮತ್ತು ವಿಕಲಚೇತನರಿಗೆ ಆದ್ಯತೆ ನೀಡುವಂತಹ ಕೌಂಟರು ಒದಗಿಸಬೇಕೆಂದು ಬ್ಯಾಂಕುಗಳಿಗೆ ಆದೇಶಿಸಲಾಗಿದೆ. |
| **ಜೀವನ ಪ್ರಮಾಣಪತ್ರಗಳ ನೀಡಿಕೆಯನ್ನು ಸುಲಭಗೊಳಿಸುವಿಕೆ** | ಪಿಂಚಣಿದಾರರಿಗೆ 'ಜೀವನ್ ಪ್ರಮಾಣ್' ಯೋಜನೆಯನ್ವಯ ಡಿಜಿಟಲ್ ರೂಪದಲ್ಲಿ ಜೀವನ ಪ್ರಮಾಣ ಪತ್ರವನ್ನು ಸಲ್ಲಿಸುವ ಸೌಲಭ್ಯದ ಜೊತೆಗೆ ಭೌತಿಕ ರೂಪದ ಜೀವನ ಪ್ರಮಾಣಪತ್ರವನ್ನು ಪಿಂಚಣಿ ಪಾವತಿ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಸಹಾ ಸಲ್ಲಿಸಲು ಅವಕಾಶವಿದೆ. ಹೀಗೆ ಪ್ರಮಾಣಪತ್ರವನ್ನು ಸ್ವೀಕರಿಸುವ ಬ್ಯಾಂಕು, ತನ್ನ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ವಿವರಗಳನ್ನು ತಪ್ಪದೇ ದಾಖಲಿಸುವುದರ ಮೂಲಕ ವಿಳಂಬವಾಗಿ ಪಿಂಚಣಿ ಜಮೆಯಾಗುವುದನ್ನು ತಪ್ಪಿಸಬೇಕು. |
| **ಖಾತೆಯ ಸ್ಥಿತಿಗತಿಯು ತನ್ನಿಂತಾನೇ ಪರಿವರ್ತನೆಗೊಳ್ಳುವಿಕೆ** | ಬ್ಯಾಂಕ್ ದಾಖಲೆಗಳಲ್ಲಿರುವ ಜನ್ಮ ದಿನಾಂಕವನ್ನು ಆಧರಿಸಿ, 'ನಿಮ್ಮ ಗ್ರಾಹಕರನ್ನು ತಿಳಿಯಿರಿ' (ಕೆವೈಸಿ) ನಿಯಮಗಳನ್ನು ಪೂರೈಸಿರುವಂತಹ ಖಾತೆಗಳು, ತನ್ನಿಂತಾನೇ 'ಹಿರಿಯ ನಾಗರಿಕರ ಖಾತೆಗಳು' ಎಂದು ಪರಿವರ್ತನೆಗೊಳ್ಳಬೇಕು. |
| **ನಮೂನೆ 15ಜಿ/ಹೆಚ್ ಸಲ್ಲಿಕೆಯನ್ನು ಸುಲಭಗೊಳಿಸುವಿಕೆ** | ನಿಗದಿತ ಸಮಯದೊಳಗೇ ತಮ್ಮ ನಮೂನೆ 15ಜಿ/ಹೆಚ್‌ಗಳನ್ನು ಸಲ್ಲಿಸಲು ಅನುಕೂಲವಾಗುವಂತೆ ಈ ನಮೂನೆಗಳನ್ನು ಅವಶ್ಯವಿರುವ ಹಿರಿಯ ನಾಗರಿಕರು ಮತ್ತು ವಿಕಲಚೇತನರಿಗೆ ವರ್ಷಕ್ಕೊಮ್ಮೆ (ಮುಖ್ಯವಾಗಿ ಏಪ್ರಿಲ್ ತಿಂಗಳಿನಲ್ಲಿಯೇ) ಒದಗಿಸಬೇಕೆಂದು ಬ್ಯಾಂಕುಗಳಿಗೆ ಆದೇಶಿಸಲಾಗಿದೆ. |
| **ಮನೆ ಹೊಸಿಲಿನಲ್ಲಿ/ ಬಾಗಿಲಿನಲ್ಲಿ ಬ್ಯಾಂಕಿಂಗ್** | ನಗದು ಮತ್ತು ಸಂಲೇಖಗಳನ್ನು (ಇನ್ಸ್ಟ್ರುಮೆಂಟ್ಸ್) ಸ್ವೀಕೃತಿಪತ್ರ ನೀಡಿ ಪಡೆದುಕೊಳ್ಳುವುದು, ಖಾತೆಯಿಂದ ಹಿಂಪಡೆಯುವಾಗ ನಗದು ಬಟವಾಡೆ, ಡಿಮ್ಯಾಂಡ್ ಡ್ರಾಫ್ಟ್‌ಗಳ ಬಟವಾಡೆ, ನಿಮ್ಮ ಗ್ರಾಹಕರ ಬಗ್ಗೆ ತಿಳಿಯಿರಿ (ಕೆವೈಸಿ)ಗೆ ಸಂಬಂಧಿಸಿದ ದಾಖಲೆಗಳು ಮತ್ತು ಜೀವನ ಪ್ರಮಾಣ ಪತ್ರಗಳ ಸಲ್ಲಿಕೆ ಇವೇ ಮುಂತಾದ ಸೌಲಭ್ಯಗಳನ್ನು ಗ್ರಾಹಕರ ಮನೆ ಬಾಗಿಲಿನಲ್ಲಿಯೇ ಒದಗಿಸಲು ಸೂಕ್ತ ಕ್ರಮಕೈಗೊಳ್ಳಬೇಕೆಂದು ಬ್ಯಾಂಕುಗಳಿಗೆ ಆದೇಶಿಸಲಾಗಿದೆ. |

### ನಮೂನೆ 15 ಜಿ ಮತ್ತು ನಮೂನೆ 15ಹೆಚ್

ನೀವು 60 ವರ್ಷ ಮೀರಿದ್ದಲ್ಲಿ ಮತ್ತು ಶಾಶ್ವತ ಖಾತಾ ಸಂಖ್ಯೆ–ಪಾನ್ (Permanent Account Number-PAN) ಹೊಂದಿದ್ದಲ್ಲಿ ಮತ್ತು ವಾರ್ಷಿಕ ಆದಾಯದ ಮೇಲಿನ ತೆರಿಗೆಯು 'ಶೂನ್ಯ'ವಾಗಿದ್ದಲ್ಲಿ ತಾವು ನಮೂನೆ 15ಹೆಚ್ ಸಲ್ಲಿಸಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಬ್ಯಾಂಕುಗಳು ಆದಾಯ ತೆರಿಗೆ 1962ರ ನಿಯಮಗಳ ಪ್ರಕಾರ ಠೇವಣಿದಾರರ ತೆರಿಗೆಯನ್ನು ಮೂಲದಲ್ಲಿಯೇ ಕಡಿತ (TDS)ಗೊಳಿಸುವುದಿಲ್ಲ.

ನಮೂನೆ 15ಹೆಚ್ ಸಲ್ಲಿಸಿದಾಗ ನಿಮ್ಮ ಬ್ಯಾಂಕಿನಿಂದ ಸ್ವೀಕೃತಿಪತ್ರವನ್ನು ತಪ್ಪದೇ ಪಡೆಯಬೇಕು. ನಮೂನೆ 15ಹೆಚ್ ಎಂಬುದು 60 ವರ್ಷ ಮೀರಿದ ನಿವಾಸಿ ವ್ಯಕ್ತಿಗಳಿಗೆ (Resident Individuals) ಸಂಬಂಧಿಸಿದ್ದರೆ, ನಮೂನೆ 15ಜಿ ಎಂಬುದು 60 ವರ್ಷಗಳ ಒಳಗಿನ ನಿವಾಸಿ ವ್ಯಕ್ತಿಗಳಿಗೆ ಸಂಬಂಧಿಸಿದೆ. ನಮೂನೆ 15ಜಿ ಕುರಿತಂತೆ ಮತ್ತೊಂದು ನಿಯಮವೆಂದರೆ ಎಲ್ಲಾ ಮೂಲಗಳಿಂದ ಗಳಿಸುವ ಬಡ್ಡಿ ಆದಾಯವು ಆಯಾ ವರ್ಷದ ಗರಿಷ್ಠ ಆದಾಯ ರಿಯಾಯಿತಿ ಮಿತಿಗಿಂತ ಕಡಿಮೆಯಾಗಿರಬೇಕು ಎಂಬುದು.

**ಪ್ರತಿ ವರ್ಷ ನಿಮ್ಮ ತೆರಿಗೆ ರಿಟರ್ನ್‌ಗಳನ್ನು ಜುಲೈ 31 ರೊಳಗೆ ಸಲ್ಲಿಸಬೇಕೆಂಬುದು ನೆನಪಿರಲಿ**

ನಿಮಗೆ ತೆರಿಗೆ ರಿಟರ್ನ್‌ಗಳನ್ನು ಸಲ್ಲಿಸಲು ನೆರವಿನ ಅವಶ್ಯಕತೆ ಇದ್ದಲ್ಲಿ, ಆದಾಯ ತೆರಿಗೆ ಇಲಾಖೆಯು ನೇಮಿಸಿರುವ ಅಧಿಕೃತ ತೆರಿಗೆ ರಿಟರ್ನ್ ಸಿದ್ಧಪಡಿಸುವವರನ್ನು ಈ ಜಾಲತಾಣದಲ್ಲಿ ಪಡೆಯಿರಿ: www.trpscheme.com

**ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಇಲ್ಲಿಗೆ ಭೇಟಿ ನೀಡಿ**
www.incometaxindia.gov.in

## ಗುರಿ ಪ್ರಧಾನ ಹಣಕಾಸು ಸಾಕ್ಷರತಾ ಪುಸ್ತಿಕೆ

ಭಾರತೀಯ ರಿಸರ್ವ್ ಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಡಿ.ಕೆ. ಮೊಹಂತಿ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ 'ಹಣಕಾಸು ಸೇರ್ಪಡೆಗಾಗಿ ಮಧ್ಯಮಾವಧಿ ಮಾರ್ಗ ಸಮಿತಿ'ಯ ಶಿಫಾರಸುಗಳ ಪೈಕಿ – "ವಿವಿಧ ಉದ್ದೇಶಿತ ಗುಂಪುಗಳು ವಿಭಿನ್ನ ರೀತಿಯ ಹಣಕಾಸು ಶಿಕ್ಷಣವನ್ನು ಅಪೇಕ್ಷಿಸುವುದರಿಂದ ಹಣಕಾಸು ಶಿಕ್ಷಣದಲ್ಲಿ 'ಎಲ್ಲವನ್ನೂ ಒಳಗೊಂಡ ಒಂದೇ ಬುಟ್ಟಿ' (A one size fits all) ಎನ್ನುವ ವಿಧಾನವು ಅಷ್ಟೇನೂ ಸಮರ್ಪಕವೆನಿಸಲಾರದು, ಆದುದರಿಂದ ವಿವಿಧ ಉದ್ದೇಶಿತ ಗುಂಪುಗಳಿಗೆ ತಕ್ಕಂತೆ ಶಿಕ್ಷಣ ಸಾಮಗ್ರಿಯನ್ನು ರೂಪಿಸುವುದು ಅಗತ್ಯ" ಎಂಬುದೂ ಒಂದು.

ಭಾರತೀಯ ರಿಸರ್ವ್ ಬ್ಯಾಂಕಿನ ಹಣಕಾಸು ಸೇರ್ಪಡೆ ಮತ್ತು ಅಭಿವೃದ್ಧಿ ವಿಭಾಗವು ರೈತರು, ಸಣ್ಣ ಉದ್ದಿಮೆದಾರರು, ಶಾಲಾ ಮಕ್ಕಳು, ಸ್ವಸಹಾಯ ಗುಂಪುಗಳು ಮತ್ತು ಹಿರಿಯ ನಾಗರಿಕರು – ಹೀಗೆ ಐದು ವಿವಿಧ ಉದ್ದೇಶಿತ ಗುಂಪುಗಳಿಗೆ ಸಂಬಂಧಿಸಿದಂತೆ ಆಯಾ ವಿಷಯಕ್ಕೆ ತಕ್ಕಂತಹ ಹಣಕಾಸು ಸಾಕ್ಷರತಾ ಪುಸ್ತಿಕೆಗಳನ್ನು ಹೊರತಂದಿದೆ. ಐದು ಪುಸ್ತಕಗಳ ಈ ಶ್ರೇಣಿಯಲ್ಲಿ ಈ ಪುಸ್ತಕವೂ ಒಂದು.

**ಹಕ್ಕು ನಿರಾಕರಣೆ (ಡಿಸ್‌ಕ್ಲೇಮರ್)**

ಓದುಗರನ್ನು ಹಣಕಾಸು ಸಾಕ್ಷರರನ್ನಾಗಿ ಮಾಡಬೇಕೆಂಬ ಪ್ರಾಮಾಣಿಕ ಉದ್ದೇಶದಿಂದ ಈ ಪುಸ್ತಕವನ್ನು ಓದಲು ಮತ್ತು ಬೋಧಿಸಲು ಅನುಕೂಲಕರವಾದ ವಸ್ತುವನ್ನಾಗಿ ರೂಪಿಸಲಾಗಿದೆಯೇ ಹೊರತು ಇದರಲ್ಲಿ ಯಾವುದೇ ನಿರ್ದಿಷ್ಟ ಹಣಕಾಸು ಉತ್ಪನ್ನಗಳು ಅಥವಾ ಸೇವೆಗಳ ಬಗ್ಗೆ ನಿರ್ಧಾರ ಕೈಗೊಳ್ಳುವಂತೆ ಓದುಗರ ಮೇಲೆ ಪ್ರಭಾವ ಬೀರುವ ಯಾವುದೇ ಉದ್ದೇಶವಿರುವುದಿಲ್ಲ.

**ಹಕ್ಕುಗಳು:**
ಮೊದಲ ಮುದ್ರಣ = ಏಪ್ರಿಲ್ 2018
ವಿಷಯಗಳ ಮೂಲವನ್ನು ಸ್ಮರಿಸಿದ ಸಂದರ್ಭದಲ್ಲಿ ಮಾತ್ರ ಇದರಲ್ಲಿ ಅಡಕವಾಗಿರುವ ಅಂಶಗಳ ಮರುಬಳಕೆಗೆ ಅನುಮತಿ ಇದೆ.

**ಲೇಖಕರು ಮತ್ತು ಪ್ರಕಾಶಕರು:**
ಹಣಕಾಸು ಸೇರ್ಪಡೆ ಮತ್ತು ಅಭಿವೃದ್ಧಿ ವಿಭಾಗ
ಭಾರತೀಯ ರಿಸರ್ವ್ ಬ್ಯಾಂಕ್
10ನೇ ಮಹಡಿ, ಕೇಂದ್ರೀಯ ಕಛೇರಿ ಕಟ್ಟಡ
ಷಾಹೀದ್ ಭಗತ್ ಸಿಂಗ್ ಮಾರ್ಗ, ಕೋಟೆ, ಮುಂಬಯಿ

**ಆಭಾರ ಮನ್ನಣೆ**
ವಿನ್ಯಾಸ: ಕೌಶಿಕ್ ರಾಮಚಂದ್ರನ್

**ಹಣಕಾಸು ಸೇರ್ಪಡೆ ಮತ್ತು ಅಭಿವೃದ್ಧಿ ವಿಭಾಗ**
ಭಾರತೀಯ ರಿಸರ್ವ್ ಬ್ಯಾಂಕು
10ನೇ ಮಹಡಿ, ಕೇಂದ್ರ ಕಛೇರಿ, ಮುಂಬಯಿ 400 001, ಭಾರತ